# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

## ಸಿ ಸಿ ನಂ.3673/2021

**ಫಿರ್ಯಾದುದಾರರು ಃ-** ರಾಜ್ಯ ಪೋಲೀಸರು, ಹಲಗೂರು ಪೊಲೀಸ್ ಠಾಣೆ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಃ ವಿರುದ್ಧ ಃ

**ಆರೋಪಿಯ ಹೆಸರು ಃ-** ಶ್ರೀ ಶಿವರಾಜು ಉಃ ಗಂಗೂಲಿ ಬಿನ್ ಶಿವಲಿಂಗಯ್ಯ,
23 ವರ್ಷಗಳು.

ವಾಸಃ ಬಾಳೆಹೊನ್ನಿಗ ಗ್ರಾಮ,
ಹಲಗೂರು ಹೋಬಳಿ
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

## -ಃ ದೋಷಾರೋಪಣೆ ಃ-

ಸಚಿನ್ ಕುಮಾರ್ ಶಿವಪೂಜಿ, ಬಿ.ಎ.ಎಲ್., ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಆದ ನಾನು ನಿಮ್ಮ ವಿರುದ್ಧ ಹೊರಸಿರುವ ದೋಷಾರೋಪಣೆ ಏನೆಂದರೆ ಃ

ಮಾನ್ಯ ಘನ ನ್ಯಾಯಾಲಯದ ವ್ಯಾಪ್ತಿಗೆ ಬರುವ ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿ, ಬಾಳೆಹೊನ್ನಿಗ ಗ್ರಾಮದಲ್ಲಿ ದಿನಾಂಕಃ 30.12.2020 ರಂದು ರಾತ್ರಿ 10.00 ಗಂಟೆಯ ಸಮಯದಲ್ಲಿ ಆರೋಪಿಯಾದ ನೀವು ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳ ಪರವಾಗಿ ಸಾಕ್ಷಿ-02 ರವರ ಮನೆಯ ಮುಂದೆ ಪಟಾಕಿ ಸಿಡಿಸಿ ಸಂಭ್ರಮಿಸಲು ಸಾಕ್ಷಿ-02 ರವರ ಕಾರ್ ಮತ್ತು ಬೈಕ್‌ಗಳು ನಿಲ್ಲಿಸಿರುವ ಜಾಗಕ್ಕೆ ಬಂದು ಪಟಾಕಿಯನ್ನು ಬೆಂಕಿ ಹಚ್ಚಲು ಯತ್ನಿಸುತ್ತಿದ್ದಾಗ, ಸಾಕ್ಷಿ-02 ರವರು ಇಲ್ಲಿ ಪಟಾಕಿಯನ್ನು ಹಚ್ಚಬೇಡಿ ಕಾರ್ ಬೈಕ್‌ಗಳಿವೆ ಮನೆಯಲ್ಲಿ 7 ತಿಂಗಳ ಮಗುವಿದೆ ಎಂದು ಹೇಳಿದಾಗ ಆರೋಪಿಯಾದ ನೀವು ಸಾಕ್ಷಿ-02 ರವರಿಗೆ ಅವಾಚ್ಯ ಶಬ್ದಗಳಿಂದ ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟಾಗುವಂತೆ ಬೈದು ಭಾರತ ದಂಡ ಸಂಹಿತೆ ಕಲಂ.504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, ಆರೋಪಿಯಾದ ನೀವು ಸಾಕ್ಷಿ-02 ರವರನ್ನು ಜಾಡಿಸಿ ತಳ್ಳಿ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿ ಭಾರತ ದಂಡ ಸಂಹಿತೆ ಕಲಂ.323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿರುವಿರಿ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಮಳವಳ್ಳಿ.

ದಿನಾಂಕಃ26.02.2024

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ**

**ಸಿ ಸಿ ನಂ.3673/2021**

**ಫಿರ್ಯಾದುದಾರರು ಃ- ಹಲಗೂರು ಪೊಲೀಸ್ ಠಾಣೆ**

**ಃ ವಿರುದ್ಧ ಃ**

**ಆರೋಪಿ ಃ-**

**ಪ್ರಶ್ನೆಃ- 1) ಮೇಲ್ಕಂಡಂತೆ ಓದಿ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೆ?**
**ಉತ್ತರಃ-** ತಿಳಿಯಿತು
**ಪ್ರಶ್ನೆಃ- 2) ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ?**
**ಉತ್ತರಃ** ವಿಚಾರಣೆಯಾಗಬೇಕು

**(ಮೇಲ್ಕಂಡಂತೆ ದೋಷರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ್ದು, ಆರೋಪಿ ನೀಡುವ ಉತ್ತರವನ್ನು ಯಥಾವತ್ತಾಗಿ ನಾನೇ ಸ್ವತಃ ಬರೆದುಕೊಂಡಿರುವುದು ನಿಜವೆಂದು ದೃಢಿಕರಿಸುತ್ತೇನೆ.)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

**ದಿನಾಂಕಃ26.02.2024** ಮಳವಳ್ಳಿ.